# ಹರಿಕ್ಷೇತ್ರದಿಂದ ಹರಕ್ಷೇತ್ರಕ್ಕೆ

ಸ್ವಾಮಿ ಕರುಣಾಕರಾನಂದ

(ಹಿಂದಿನ ಸಂಚಿಕೆಯಿಂದ)

## ಮುಕ್ತಿನಾಥ ಕ್ಷೇತ್ರದ ಪೌರಾಣಿಕ ಐತಿಹ್ಯ

ಮುಕ್ತಿನಾಥಕ್ಕೆ ಪುರಾಣಗಳಲ್ಲಿ 'ಸಾಲಗ್ರಾಮ ಕ್ಷೇತ್ರ'ವೆಂಬ ಹೆಸರಿದೆ. ಗಂಡಕಿ ನೀರಿನಲ್ಲಿ ಸಿಗುವ ಕಲ್ಲುಗಳೆಲ್ಲವೂ ವಿಷ್ಣು ರೂಪವೇ ಆಗಿರುತ್ತವೆ. ಅದನ್ನು ಅತ್ಯಂತ ಭಕ್ತಿಯಿಂದ ಅನೇಕ ಹಿಂದೂಗಳು ತಮ್ಮ ಮನೆಗಳಲ್ಲಿ ವಿಧಿವತ್ತಾಗಿ ಪೂಜಿಸುತ್ತಾರೆ. ವರಾಹಪುರಾಣದ ೧೪೪ನೇ ಅಧ್ಯಾಯದಲ್ಲಿ ಹೀಗಿದೆ:

**ಪುರಾ ವಿಷ್ಣುಸ್ತಪಸ್ತೇಪೇ ಲೋಕಾನಾಂ ಹಿತಕಾಮ್ಯಯಾ ।**
**ಹಿಮಾಲಯೇ ಗಿರೌ ರಮ್ಯೇ ದೇವತಾಗಣಸೇವಿತೇ ॥**
**ತತೋ ಬಹುತಿಥೇ ಕಾಲೇ ಯಾತೇ ಸತಿ ತಪಸ್ಯತಃ ।**
**ತಸ್ಯೋಷ್ಮಣಾ ಸಮುದ್ಭೂತಃ ಸ್ವೇದಪೂರಸ್ತು ಗಂಡಯೋಃ ।**
**ತೇನ ಜಾತಾ ಧುನೀ ದಿವ್ಯಾ ಲೋಕಾನಾಮಘಹಾರಿಣೀ ॥**

"ರಮ್ಯವಾದ ಹಿಮಾಲಯ ಪರ್ವತದಲ್ಲಿ ವಿಷ್ಣುವು ಲೋಕದ ಹಿತಕ್ಕಾಗಿ ತಪಸ್ಸನ್ನು ಆಚರಿಸಿದನು. ಬಹಳ ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದ ಆತನ ಕಪೋಲಗಳಿಂದ ಬೆವರು ಮೂಡಿ ಜಗತ್ತಿನ ಪಾಪಗಳನ್ನು ನಾಶ ಮಾಡುವ ದಿವ್ಯನದಿಯಾದ ಗಂಡಕಿ ಹುಟ್ಟಿತು." ಹಾಗೆಯೇ ಗಂಡಕಿ ನದಿಯ ಬಗ್ಗೆ ಇನ್ನಷ್ಟು ಶ್ಲೋಕಗಳು ಕಾಣಸಿಗುತ್ತವೆ:

**ಗಂಡಕ್ಯಾಪಿ ಪುರಾ ತಪ್ತಂ ವರ್ಷಾಣಾಮಯುತಂ ವಿಭೋ ।**
**ಶೀರ್ಣಪರ್ಣಾಶನಂ ಕೃತ್ವಾ ವಾಯುಭಕ್ಷಾಪ್ಯನಂತರಮ್॥**
**ದಿವ್ಯವರ್ಷಶತಂ ತೇಪೇ ವಿಷ್ಣುಂ ಚಿಂತಯತೀ ತದಾ ।**
**ತತಸ್ಸಾಕ್ಷಾಜ್ಜಗನ್ನಾಥೋ ಹರಿರ್ಭಕ್ತಜನಪ್ರಿಯಃ ॥**
**ಉವಾಚ ಮಧುರಂ ವಾಕ್ಯಂ ಪ್ರೀತಃ ಪ್ರಣತವತ್ಸಲಃ ।**
**ಗಂಡಕಿ ತ್ವಾಂ ಪ್ರಸನ್ನೋಽಸ್ಮಿ ತಪಸಾ ವಿಸ್ಮಿತೋಽನಘೇ ॥**
**ಅನವಚ್ಛಿನ್ನಯಾ ಭಕ್ತ್ಯಾ ವರಂ ವರಯ ಸುವ್ರತೇ ।**
**ಕಿಂ ದೇಯಂ ತದ್ವದಾಶು ಪ್ರೀತೋಽಸ್ಮಿ ವರವರ್ಣಿನಿ ॥**
**ಯದಿ ದೇವ ಪ್ರಸನ್ನೋಽಸಿ ದೇಯೋ ಮೇ ವಾಂಛಿತೋ ವರಃ।**
**ಮಮ ಗರ್ಭಗತೋ ಭೂತ್ವಾ ವಿಷ್ಣೋ ಮತ್ಪುತ್ರತಾಂ ವ್ರಜ ।**
**ಗಂಡಕೀಮವದತ್ ಪ್ರೀತಃ ಶೃಣು ದೇವಿ ವಚೋ ಮಮ ॥**


"ಗಂಡಕೀ ನದಿಯು ಹಿಂದೆ ಹತ್ತು ಸಾವಿರ ವರ್ಷಗಳು ಕೇವಲ ಎಲೆಗಳನ್ನೇ ತನ್ನ ಆಹಾರವಾಗಿಸಿಕೊಂಡು, ಗಾಳಿಯನ್ನೇ ಸೇವಿಸುತ್ತ ತಪಸ್ಸು ಮಾಡಿದಳಂತೆ. ವಿಷ್ಣುವನ್ನೇ ಚಿಂತಿಸುತ್ತ ತಪಸ್ಸನ್ನು ಮಾಡುತ್ತಿದ್ದ ಆಕೆಯ ಮುಂದೆ ಭಕ್ತವತ್ಸಲನಾದ ವಿಷ್ಣುವು ಕಾಣಿಸಿಕೊಂಡು, 'ವರವನ್ನು ಕೇಳಿಕೊ' ಎಂದಾಗ 'ನೀನೇ ನನಗೆ ಮಗನಾಗಿ ಹುಟ್ಟಿ ಬಾ' ಎಂದಳಂತೆ. ಭಗವಂತನು ಪ್ರೀತಿಯಿಂದ ಆಕೆಗೆ ಈ ವರವನ್ನು ನೀಡಿದನು."

**ಶಾಲಗ್ರಾಮಶಿಲಾರೂಪೀ ತವಗರ್ಭಗತಸ್ಸದಾ ।**
**ಸ್ಥಾಸ್ಯಾಮಿ ತವ ಪುತ್ರತ್ವೇ ಭಕ್ತಾನುಗ್ರಹಕಾರಣಾತ್ ।**
**ಮತ್‌ಸಾನ್ನಿಧ್ಯಾನ್ನದೀನಾಂ ತ್ವಮತಿಶ್ರೇಷ್ಠಾ ಭವಿಷ್ಯಸಿ ॥**
**ದರ್ಶನಾತ್ ಸ್ಪರ್ಶನಾತ್ ಸ್ನಾನಾತ್ ಪಾನಾಚ್ಚೈವಾವಗಾಹನಾತ್।**
**ಹರಿಷ್ಯಾಮಿ ಮಹಾಪಾಪಂ ವಾಙ್ಮನಃಕಾಯಸಂಭವಮ್ ॥**

"ನಾನು ನಿನ್ನ ಗರ್ಭದಲ್ಲಿ ಸಾಲಗ್ರಾಮಶಿಲೆಯ ರೂಪದಿಂದ ಯಾವಾಗಲೂ ಇರುವೆನು. ನನ್ನ ಸನ್ನಿಧಾನವು ನಿನ್ನಲ್ಲಿ ಇರುವುದರಿಂದ ನೀನು ನದಿಗಳಲ್ಲೇ ಅತಿಶ್ರೇಷ್ಠಳಾಗುವೆ. ನಿನ್ನನ್ನು ನೋಡುವುದರಿಂದಲೂ, ಸ್ಪರ್ಶಿಸುವುದರಿಂದಲೂ, ನಿನ್ನಲ್ಲಿ ಸ್ನಾನ ಮಾಡುವುದರಿಂದಲೂ, ನಿನ್ನ ನೀರನ್ನು ಕುಡಿಯುವುದರಿಂದಲೂ, ಮಾತು-ಮನಸ್ಸು-ದೇಹಗಳಿಂದುಂಟಾದ ಮಹಾಪಾಪಗಳನ್ನೂ ನಾನು ತೆಗೆದುಹಾಕುತ್ತೇನೆ."

ಇನ್ನೊಂದು ಪುರಾಣದಲ್ಲಿ ವಿಷ್ಣುವು ಗಜರಾಜನ ಕಾಲನ್ನು ಹಿಡಿದು ಎಳೆಯುತ್ತಿದ್ದ ಮೊಸಳೆಯನ್ನು ಕೊಲ್ಲಲು ತನ್ನ ಚಕ್ರವನ್ನು ಎಸೆದಾಗ, ಗಂಡಕಿಯ ಕಲ್ಲುಗಳಲ್ಲಿ ಚಕ್ರದ ಗುರುತುಗಳು ಮೂಡಿದವು ಎಂಬುದಾಗಿ ಹೇಳಿದೆ.

**ದಿವ್ಯ ಸನ್ನಿಧಿ:** ಒಂದು ಗಂಟೆ ಮೇಲಕ್ಕೆ ಏರಿ ಮುಕ್ತಿನಾಥ ದೇವಾಲಯದ ಮುಂದೆ ಬಂದು ಸೇರಿದೆ. ಸಮುದ್ರಮಟ್ಟದಿಂದ ೩,೭೧೦ ಮೀಟರ್‌ಗಳ ಎತ್ತರದಲ್ಲಿದೆ ಈ ಕ್ಷೇತ್ರ. ವೈಷ್ಣವಾಚಾರ್ಯರಾದ ತಿರುಮಂಗೈ ಆಳ್ವಾರರು ಮುಕ್ತಿನಾಥವನ್ನು ಹೊಗಳಿ ಹಾಡಿದ್ದಾರೆ. ಪೆರಿಯಾಳ್ವಾರರು ಶ್ರೀಮೂರ್ತಿಯನ್ನು 'ಸಾಲಗ್ರಾಮಮುಡೈಯ ನಂಬಿ' ಎಂದು ಸ್ತುತಿಸಿದ್ದಾರೆ. ಧವಳಗಿರಿ ಶ್ರೇಣಿಯಿಂದ ಸುತ್ತುವರೆದಿರುವ ಮುಕ್ತಿನಾಥ ದೇವಾಲಯವನ್ನು ನೋಡಿದರೆ ಭಾರತೀಯರಿಗೆ, ಅದರಲ್ಲೂ ದಾಕ್ಷಿಣಾತ್ಯರಿಗೆ ಆಶ್ಚರ್ಯವಾಗದಿರದು! ನಮ್ಮಲ್ಲಿಯ ಬೃಹದಾಕಾರದ ವಿಮಾನಗಳೂ, ಸುಂದರ ನಾಟ್ಯಮಂಟಪಗಳೂ, ಕೆತ್ತನೆಗಳೂ, ಪ್ರದಕ್ಷಿಣಾಪ್ರಾಕಾರಗಳೂ ಅಲ್ಲಿ ಕಾಣುವುದೇ ಇಲ್ಲ. ಬದಲಾಗಿ ಅತ್ಯಂತ ಸರಳವಾದ ನೇಪಾಳಿ ಶೈಲಿಯಲ್ಲಿ ಕಟ್ಟಿರುವ ಒಂದು ಪುಟ್ಟದಾದ ದೇವಾಲಯ (ಗುಡಿಯೆನ್ನಲೂ ಅಡ್ಡಿಯಿಲ್ಲ)! ಅದರ ಮುಂದೆ ಧರ್ಮ ಹಾಗೂ ಅಧರ್ಮದ ಎರಡು ಕೊಳಗಳು ಇವೆ. ದೇವಾಲಯದ ಹಿಂದೆ ಹಸುವಿನಾಕಾರದ ೧೦೮ ತೂಬುಗಳಿಂದ ೧೦೮ ತೀರ್ಥಗಳು ಹೊರಹೊಮ್ಮುತ್ತಿರುತ್ತವೆ. ಮೊದಲು ಅವುಗಳಲ್ಲಿ ಸ್ನಾನ ಮಾಡಿ ಭಗವಂತನ ದರ್ಶನಕ್ಕೆ ಹೋದೆ. ಅಲ್ಲಿ ಇನ್ನೊಂದು ಆಶ್ಚರ್ಯ ಕಾದಿತ್ತು! ಅಲ್ಲಿ ಬೌದ್ಧ ಸಂನ್ಯಾಸಿನಿಯೇ ಪೂಜಾರಿ. ಹಿಂದೂ ಭಕ್ತರ ಪೂಜೆಗಳನ್ನು ನಡೆಸಿಕೊಡಲೆಂದೇ ಇದ್ದ ಇನ್ನೊಬ್ಬರು ಸ್ವಾಮಿಗಳನ್ನು ನೋಡಿದೆ.



ಮುಕ್ತಿನಾಥದ ಮುಖ್ಯದ್ವಾರ

ಆದರೆ ಅವರು ಯಾವಾಗಲೂ ಅಲ್ಲಿ ಇರುವುದಿಲ್ಲ. ಅಲ್ಲಿ ಗರ್ಭಮಂದಿರಕ್ಕೂ ಸಹ ಪ್ರವೇಶವಿದೆ. ಶ್ರೀಮೂರ್ತಿಯು ಭೂದೇವಿ, ಲಕ್ಷ್ಮಿ, ಗೋದಾದೇವಿಯರೊಂದಿಗೆ ಆನಂದ ದಿಂದಿರುವಂತಿದೆ. ರಾಮಾನುಜಾಚಾರ್ಯರು, ಗರುಡ, ಮಣವಾಲ ಮಾಮುನಿಗಳು – ಇವರೆಲ್ಲರ ದಿವ್ಯ ವಿಗ್ರಹ ಗಳೂ ಇವೆ. ಶ್ರೀವಿಗ್ರಹದ ಮುಂದೆ ಎರಡು ದೊಡ್ಡ ಗಾತ್ರದ ಸಾಲಗ್ರಾಮಗಳಿದ್ದವು.

ಆ ದಿನ ಬೆಂಗಳೂರಿನ ಭಕ್ತರೊಬ್ಬರು, ತಮಿಳುನಾಡಿನ ಅನೇಕ ಭಕ್ತರೊಂದಿಗೆ ಬಂದಿದ್ದರು. ನನ್ನನ್ನು ನೋಡಿ ನನಗೆ ಪ್ರಣಾಮ ಸಲ್ಲಿಸಿ ಹಣ್ಣುಗಳ ಜೊತೆಗೆ ಸಾಲಗ್ರಾಮವೊಂದನ್ನು ಕೊಟ್ಟರು. "ಎಲವೋ, ಬಂದಿಳಿದ ತತ್‌ಕ್ಷಣವೇ ನನ್ನ ಹತ್ತಿರಕ್ಕೆ ಓಡಿ ಬಂದೆಯಾ?" ಎಂದುಕೊಂಡೆ. ಈ ಮಂದಿರದ ಹತ್ತಿರ ದಲ್ಲೇ, ಅದೇ ಪ್ರಾಕಾರದಲ್ಲಿ, ನಿಸರ್ಗದತ್ತ ಅನಿಲಗಳಿಂದ ಬೆಂಕಿಯುಗುಳುತ್ತಿರುವ ಜ್ವಾಲಾದೇವಿಯನ್ನೂ ದರ್ಶನ ಮಾಡಿದೆ. ಈ ಕ್ಷೇತ್ರದ ಸಂಪೂರ್ಣ ಉಪಯೋಗವನ್ನು ಪಡೆಯುವ ಉದ್ದೇಶದಿಂದ ರಾಣಿಪಾವುವಾದಲ್ಲಿನ ಒಂದು ವಸತಿಗೃಹದಲ್ಲಿ ಇದ್ದುಕೊಂಡು ಧ್ಯಾನ, ಪಾರಾಯಣ ಗಳಲ್ಲಿ ಎರಡು ರಾತ್ರಿ ಕಳೆದೆ. ಹಗಲಿನ ಹೊತ್ತಿನಲ್ಲೇ ನಿಶ್ಶಬ್ದವಾಗಿರುವ ಕ್ಷೇತ್ರದಲ್ಲಿ ರಾತ್ರಿಯಂತೂ ಮೌನವನ್ನು ಬಯಸುವವರಿಗೆ ವರದಾಯಕವೇ ಹೌದು! ಅದೆಂತಹ ಗಭೀರ ನೀರವತೆ! ಹೌದು, ಯಾರು ಇದಕ್ಕೆ ಮಾನಸಿಕವಾಗಿ ತಯಾರಾಗಿಲ್ಲವೋ, ಅವರಿಗೆ ಹುಚ್ಚುಹಿಡಿಸುವಂತಹ ನೀರವತೆ! ಯಾವ ಆಮೋದಸಾಧನಗಳೂ ಇಲ್ಲಿ ಸಿಗುವುದಿಲ್ಲ. ಆದ್ದರಿಂದ ಹೆಚ್ಚು ಜನ ಇಲ್ಲಿ ಉಳಿದುಕೊಳ್ಳಲು ಬಯಸುವುದಿಲ್ಲ! ಅದೇ ದಿನ ಜೋಮ್‌ಸೋಮಿಗೆ ಹಿಂತಿರುಗಿಬಿಡುತ್ತಾರೆ! ರಾತ್ರಿ ಪರ್ವತ ಪ್ರಾಂತದ ಒಂದೆರಡು ನರಿಗಳ ಕೂಗು, ಹಗಲುಹೊತ್ತಿನಲ್ಲಿ ಬೆಟ್ಟದ ಗುಬ್ಬಚ್ಚಿಗಳ ವಿಚಿತ್ರ 'ಬಕ್ ಬಕ್' ಶಬ್ದ, ಆಗಾಗ ಬೆಟ್ಟದ ಕಾಗೆಗಳ 'ಕಾ ಕಾ' ಶಬ್ದಗಳ ಮಧ್ಯೆ ನಮ್ಮ ಹೃದಯದ ಬಡಿತವೂ ಕೂಡ ತುರೀಯ ಶಬ್ದವಾಗಿ ಕೇಳುತ್ತದೆ!

ಮೇ ೬ ಹಾಗೂ ೭ರ ರಾತ್ರಿಯನ್ನು ಮುಕ್ತಿನಾಥದಲ್ಲಿಯೇ ಕಳೆದು ಮೇ ೮ರ ಬೆಳಗ್ಗೆ ೫.೦೦ ಗಂಟೆಗೆ ರಾಣಿಪಾವುವಾದಿಂದ ಕಾಲ್ನಡಿಗೆಯನ್ನು 'ಸವಿಯಲು', ವಾಪಸು ಜೋಮ್‌ಸೋಮಿಗೆ ನಡೆದುಕೊಂಡೇ ಹೋಗಲು ನಿರ್ಧರಿಸಿದೆ. ನನ್ನ ಅದೃಷ್ಟಕ್ಕೆ ಹಿಂದಿನ ದಿನ ಹೊಟೆಲ್ಲಿನ ಯಜಮಾನ ನನಗೆ ಪರಿಚಯ ವಾದನು. ಮಾತಿನ ನಡುವೆ ಅವನು ಕಾಲ್ನಡಿಗೆಯ ದಾರಿಯನ್ನು ನಕ್ಷೆ ಸಹಿತ ತೋರಿಸಿಕೊಟ್ಟನು. ಕಾಗ್‌ಬೇನಿ ಎಂಬ ಊರಿನ ನಂತರ ಜೀಪಿನ ಮಾರ್ಗದಲ್ಲಿ ಹೋಗದಂತೆಯೂ, ಇನ್ನೊಂದು ಕಾಲ್ನಡಿಗೆಯ ಮಾರ್ಗದಲ್ಲಿಯೇ ಹೋದರೆ ಬೇಗ ತಲುಪಬಹುದೆಂದೂ ಅವನು ಸೂಚಿಸಿದ. ಹಾಗೆಯೇ ಮಧ್ಯಾಹ್ನ ೧೨ ಕ್ಕಿಂತ ಮೊದಲು ಗಂಡಕಿಯ ದಡವನ್ನು ಬಿಟ್ಟುಬಿಡಬೇಕೆಂದೂ, ಇಲ್ಲದಿದ್ದರೆ ಕೊರೆಯುವ ಚಳಿಗಾಳಿ ಚರ್ಮವನ್ನು ಗಾಸಿಗೊಳಿಸುವುದೆಂದೂ ಎಚ್ಚರಿಸಿದ. ಹೀಗೆ ವಿಸ್ತಾರವಾದ ಮಾಹಿತಿಯನ್ನೇ ಅವನು ನನಗೆ ಒದಗಿಸಿದ. ಸುಮಾರು ಐದು ಗಂಟೆಗಳ ರೋಮಾಂಚಕಾರಿಯಾದ ನಡಿಗೆಯ ಆ ಸವಿಯನ್ನು ಮರೆಯಲು ಅಸಾಧ್ಯ! ಅಷ್ಟು ಎತ್ತರದಿಂದ ಕೆಳಗಿಳಿಯುತ್ತಿದ್ದಂತೆ ನನ್ನ ಕಿವಿ ಅಸಾಧ್ಯವಾಗಿ ನೋಯತೊಡಗಿತು. ನೋವಿನ ಮಾತ್ರೆ ತೆಗೆದುಕೊಂಡು, ಹೆಚ್ಚು ನೀರನ್ನು ಸೇವಿಸಿದರೂ ಹೋಗಲಿಲ್ಲ. ಆಗಲಿ, ಪ್ರಕೃತಿಸೌಂದರ್ಯದ ಜೊತೆಗೆ ಈ ನೋವೂ ಒಂದು ಸೌಂದರ್ಯವೆಂದುಕೊಂಡು ಅದನ್ನು ಮರೆಯುವ ಪ್ರಯತ್ನ ಮಾಡಿದೆ. ಕಾಳಿ ಗಂಡಕಿಯ ಮಡಿಲಿನ ಮೇಲೆ ನಡೆಯುತ್ತ ಜೋಮ್‌ಸೋಮ್ ಸೇರಿದೆ. ಮಾರನೇ ದಿನ ಮೇ ೯. ವಾಪಸು ಬರಲು ಕಾಯ್ದಿರಿಸಿದ್ದ ವಿಮಾನ ರದ್ದಾಯಿತು. ತತ್‌ಕ್ಷಣವೇ ಬಸ್ಸಿನಲ್ಲಿ ಹೋಗಲು ತೀರ್ಮಾನಿಸಿ, 'ಬೇಣಿ'ಯವರೆಗೆ ಹೋಗುವ ಬಸ್ಸಿಗೆ ಮುಂಗಡ ಟಿಕೆಟ್ ಪಡೆದುಕೊಂಡೆ. ಇಲ್ಲೊಂದು ಚಿಂತೆ ಶುರುವಾಯಿತು! ಮೇ ೧೦ರ ರಾತ್ರಿ ಗೋರಖಪುರದಿಂದ ಲಕ್ನೋವಿಗೆ ನನ್ನ ರೈಲು ಟಿಕೆಟ್ ಕಾಯ್ದಿರಿಸಲಾಗಿತ್ತು. ಅನಂತರ, ಮೇ ೧೧ರಂದು ಲಕ್ನೋವಿನಿಂದ ಟನಕಪುರಕ್ಕೆ ಪ್ರಯಾಣಿಸಬೇಕಾಗಿತ್ತು. ಈಗ ನೋಡಿದರೆ, ಪೋಖರಾಗೆ ಹೋಗಿ ಅಲ್ಲಿಂದ ಗೋರಖಪುರಕ್ಕೆ ೧೧ನೇ ತಾರೀಖಿಗೆ ಮುಂಚೆ ತಲುಪಲು ಸಾಧ್ಯವಾಗುವುದೇ ಇಲ್ಲ! ಒಡನೆ ದೂರವಾಣಿಯ ಮೂಲಕ ಪರಿಚಯಸ್ಥ ಸ್ವಾಮಿಗಳನ್ನು ಸಂಪರ್ಕಿಸಿ, ನನ್ನ ಪರಿಸ್ಥಿತಿಯನ್ನು ವಿವರಿಸಿ, ಕೊಂಡಿದ್ದ ಇ-ಟಿಕೆಟ್ಟುಗಳನ್ನು ರದ್ದುಗೊಳಿಸಿದೆ. ಮಧ್ಯಾಹ್ನ ಪುಟ್ಟ ಬಸ್ಸೊಂದು ಬಂದು ನಿಂತಿತು. ಅದರಲ್ಲಿ ನನಗೆ ಸಿಕ್ಕಿದ್ದು ಕೊನೆಯ ಸೀಟು. ವಿಮಾನ ರದ್ದಾದ್ದರಿಂದ ಅನೇಕ ವಿದೇಶೀ ಪ್ರಯಾಣಿಕರಿಗೂ ಆ ಬಸ್ಸೇ ಗತಿ! ಈ ರಸ್ತೆಯಲ್ಲಿ ವಾಹನ

ಓಡಿಸುವುದೇನೂ ಹುಡುಗಾಟವಲ್ಲ! ೧೦ ರಿಂದ ೧೨ ಅಡಿಗಳ ಅಗಲದ ಆ ಕಚ್ಚಾ ರಸ್ತೆ ಏರು-ತಗ್ಗುಗಳಿಂದ ಕೂಡಿತ್ತು; ವೇಗವಾಗಿ ಹರಿಯುತ್ತಿದ್ದ ಕಾಳಿ ಗಂಡಕಿಯ ದಡದ ಮೇಲೆಯೇ ಇತ್ತು; ಚಾಲಕನಿಗೆ ಸಾಹಸ ಮಾಡಲು ಆಹ್ವಾನಿಸುತ್ತಿದ್ದಂತೆ ಇತ್ತು! ನನ್ನ ಸೀಟಿನ ಕಿಟಕಿಯಿಂದ ಕೆಳಕ್ಕೆ ಇಣುಕಿದರೆ ನಾನು ಚಕ್ರಕ್ಕಿಂತ ಹೊರಗೆ ಕುಳಿತಂತೆ ಭಾಸವಾಗುತ್ತಿತ್ತು! ಸರಿಯಾಗಿ ಗಂಡಕಿ ನದಿಯ ಮೇಲೆಯೇ ತೇಲುತ್ತಿರುವಂತೆ ಅನುಭವವಾಯಿತು! ಅದರಲ್ಲೂ ನಮ್ಮ ವಾಹನದ ಎದುರಿಗೆ ಮತ್ತೊಂದು ವಾಹನ ಬಂದರೆ, ಚಾಲಕ ಎದುರಿನವನಿಗೆ ದಾರಿ ಮಾಡಿಕೊಡುವ ಸಂದರ್ಭದಲ್ಲಿ, ನಮ್ಮ ವಾಹನದಿಂದ ಗಂಡಕಿಯನ್ನು ಕೆಳಗೆ ದಿಟ್ಟಿಸಬೇಕಾದರೆ ಗಂಡೆದೆಯೇ ಬೇಕು!

ವಿಮಾನದಲ್ಲಿ ಹೋಗುವಾಗ ಕಾಣುವ ಸೌಂದರ್ಯ ಒಂದು ಬಗೆಯದ್ದಾದರೆ, ರಸ್ತೆಯ ಮೇಲೆ ನದಿಯ ಜೊತೆಗೇ ಪಯಣಿಸುವಾಗ ಕಾಣುವ ರುದ್ರ ಸೌಂದರ್ಯವೇ ಬೇರೆ. ಹಸಿರು-ಕಪ್ಪು-ಬಿಳುಪು ಬಣ್ಣದ ಪರ್ವತಗಳು, ಧುಮ್ಮಿಕ್ಕಿ 'ಬಂಗಿ ಜಿಗಿತ' ಮಾಡುತ್ತಿರುವ ಝರಿಗಳು – ಹೀಗೆ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ದೃಶ್ಯಗಳಿಂದ ಸಿಗುವ ಆನಂದವು ನಮ್ಮ 'ಕಷ್ಟ'ಕ್ಕೆ ತಕ್ಕ 'ಪರಿಹಾರ' ವನ್ನು ನೀಡುತ್ತಿದ್ದಂತೆ ಕಂಡುಬರುತ್ತಿತ್ತು. ಸಾಯಂಕಾಲ ಸುಮಾರು ಆರು ಗಂಟೆಗೆ ಎರಡು ಬಸ್ಸುಗಳನ್ನು ಬದಲಿಸಿ ಬೇಣಿ ಎಂಬಲ್ಲಿಗೆ ಬಂದೆ. ಒಂದು ವಸತಿಗೃಹದಲ್ಲಿ ತಂಗಿದ್ದು, ಮಾರನೇ ದಿನ ನಸುಕಿನ ಬಸ್ಸು ಹಿಡಿದು ಮೇ ೧೦ರಂದು ಬೆಳಿಗ್ಗೆ ೧೦ಕ್ಕೆ ಪೋಖರಾಗೆ ತಿರುಗಿ ಬಂದು ತಲುಪಿದೆ.

ಹಾ! ಇನ್ನೊಂದು ವಿಚಾರ! ಅಂದ ಹಾಗೆ ಮುಕ್ತಿನಾಥವು ವರ್ಷವಿಡೀ ತೆರೆದೇ ಇದ್ದರೂ ಮಾರ್ಚ್ ತಿಂಗಳಿನಿಂದ ಜೂನ್ ಮತ್ತು ಸೆಪ್ಟೆಂಬರ್‌ನಿಂದ ಅಕ್ಟೋಬರ್ ತಿಂಗಳು – ಈ ಕಾಲಗಳು ಯಾತ್ರೆಗೆ ಹಿತಕರವಾಗಿರುತ್ತವೆ.

*(ಫೆಬ್ರವರಿ, ೨೦೧೪ ರ ಸಂಚಿಕೆಗೆ ಮುಂದುವರೆಯುವುದು)*


## ಸ್ವಾಮಿ ವಿವೇಕಾನಂದರ 150ನೇ ಜಯಂತಿ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ವಿವೇಕಪ್ರಭ ವಿಶೇಷ ಸಂಚಿಕೆ – ಜನವರಿ 2014

# 'ಕ್ರಿಯಾರೂಪಿ ವಿವೇಕಾನಂದ'

**"ವೇದಾಂತದ ಪರಿಕಲ್ಪನೆಗಳು ಹೊರಗೆ ಪ್ರಕಟವಾಗಬೇಕು. ಅವು ಅರಣ್ಯಗಳಲ್ಲಿ ಅಥವಾ ಗುಹೆಗಳಲ್ಲಿ ರಹಸ್ಯವಾಗಿ ಇದ್ದುಬಿಡಬಾರದು. ಅವು ಹೊರಕ್ಕೆ ಬಂದು ನ್ಯಾಯಾಂಗ ಮತ್ತು ಕಾರ್ಯಾಂಗಗಳಲ್ಲಿ ಪ್ರಕಟವಾಗಬೇಕು. ಕಡುಬಡವನ ಗುಡಿಸಲಿನಲ್ಲಿ, ಮೀನು ಹಿಡಿಯುತ್ತಿರುವ ಬೆಸ್ತನಲ್ಲಿ, ಪ್ರವಚನಕಾರನ ವೇದಿಕೆಯಲ್ಲಿ, ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಪ್ರಕಟವಾಗಬೇಕು. ಬೆಸ್ತನೊಬ್ಬ ತಾನು ಚೈತನ್ಯಸ್ವರೂಪನೆಂದು ಅರಿತುಕೊಂಡರೆ, ಅವನು ಒಳ್ಳೆಯ ಬೆಸ್ತನಾಗುವನು. ಒಬ್ಬ ವಿದ್ಯಾರ್ಥಿಯು ತಾನು ಚೈತನ್ಯಸ್ವರೂಪನೆಂದು ತಿಳಿದುಕೊಂಡರೆ, ಒಳ್ಳೆಯ ವಿದ್ಯಾರ್ಥಿಯಾಗುವನು. ಒಬ್ಬ ವಕೀಲನು ತಾನು ಚೈತನ್ಯಸ್ವರೂಪನೆಂದು ತಿಳಿದುಕೊಂಡರೆ, ಒಳ್ಳೆಯ ವಕೀಲನಾಗುವನು ಇತ್ಯಾದಿ."**

**– ಸ್ವಾಮಿ ವಿವೇಕಾನಂದ**

ವಿವೇಕಪ್ರಭ ಪತ್ರಿಕೆಯ ವತಿಯಿಂದ ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವದ ಅಂಗವಾಗಿ ಈಗಾಗಲೇ **'ವಿವೇಕಾನಂದ ವಿಚಾರಸುಧೆ'** ಎನ್ನುವ ವಿಶೇಷಾಂಕವನ್ನು ಜನವರಿ 2013 ನೇ ಸಂಚಿಕೆಯಾಗಿ ಹೊರತರ ಲಾಗಿತ್ತು. ಇದಕ್ಕೆ ಪೂರಕವಾಗಿ **'ಕ್ರಿಯಾರೂಪಿ ವಿವೇಕಾನಂದ'** (Vivekananda in Action) ಎನ್ನುವ ವಿಷಯವನ್ನು ಕುರಿತು ವಿಶೇಷ ಸಂಚಿಕೆಯನ್ನು ಜನವರಿ 2014 ನೆಯ ಸಂಚಿಕೆಯಾಗಿ ಪ್ರಕಟಿಸಲಾಗುತ್ತಿದೆ. ಇದರಲ್ಲಿ ಸ್ವಾಮಿ ವಿವೇಕಾನಂದರ ಅನುಷ್ಠಾನಪ್ರದ ಸಂದೇಶಗಳ ಬಗ್ಗೆ ವಿದ್ವತ್ಪೂರ್ಣ ವಿಶ್ಲೇಷಣೆಯಲ್ಲದೆ, ರಾಮಕೃಷ್ಣ ಮಹಾಸಂಘದ ಹಲವಾರು ಕೇಂದ್ರಗಳ ಸೇವಾಕಾರ್ಯಗಳ ವಿವರವನ್ನು ಛಾಯಾಚಿತ್ರಗಳ ಮೂಲಕ ಆಕರ್ಷಣೀಯ ವಾಗಿ ಪ್ರಸ್ತುತಪಡಿಸಲಾಗಿದೆ. ಇದಲ್ಲದೆ, ಸ್ವಾಮಿ ವಿವೇಕಾನಂದ ಭಾವಧಾರೆಯಿಂದ ಸ್ಫೂರ್ತಿಪಡೆದ ಇತರ ಸೇವಾಸಂಸ್ಥೆಗಳು ನಡೆಸುತ್ತಿರುವ ಸೇವಾಕಾರ್ಯಗಳ ಬಗ್ಗೆಯೂ ಪರಿಚಯಾತ್ಮಕ ಲೇಖನಗಳು ಇರುತ್ತವೆ.

**ಸ್ವಾಮಿ ವಿವೇಕಾನಂದರ 150ನೇ ಜಯಂತಿ ಪ್ರಯುಕ್ತ ಪ್ರಕಟವಾಗುತ್ತಿರುವ ಈ ಅಮೂಲ್ಯ ಸಂಪುಟವನ್ನು ನಮ್ಮ ಚಂದಾದಾರರಿಗೆ ಉಚಿತವಾಗಿಯೇ ಕಳುಹಿಸಿಕೊಡಲಾಗುವುದು. 10ಕ್ಕಿಂತ ಹೆಚ್ಚಿನ ಪ್ರತಿಗಳನ್ನು ಪಡೆದುಕೊಳ್ಳುವವರಿಗೆ ಶೇ. 15 ರಿಯಾಯತಿ ನೀಡಲಾಗುವುದು. ಬೆಲೆ : ರೂ. 75/– ; ಪುಟಗಳು : ಸುಮಾರು 120**

**ಹೆಚ್ಚಿನ ಪ್ರತಿಗಳನ್ನು ಕಾದಿರಿಸಲು ಇಂದೇ ಸಂಪರ್ಕಿಸಿ :**

**'ವಿವೇಕಪ್ರಭ ವಿಭಾಗ', ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020**

E-mail: vivekaprabha@hotmail.com; kannada.vivekaprabha@gmail.com